ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಮೇಲುಕೋಟೆ ಅಭಯಾರಣ್ಯವು ೪೯೮೨ ಹೆಕ್ಟೇರುಗಳಾಗಿರುತ್ತದೆ.

ಪಾಂಡವಪುರ ತಾಲ್ಲೂಕು ಳಳಳ ಹೆಕ್ಟೇರು ನಾಗಮಂಗಲ ಕೆ.ಆರ್. ಪೇಟೆ ತಾಲ್ಲೂಕುಗಳಂ ೪೫೩೪ ಹೆಕ್ಟೆಕರು.

ಆ) ಪ್ರಕೃತಿ ಸಂರಕ್ಷಣೆ ವಿಚಾರದಲ್ಲಿ ಕೇವಲ ಕಾವಲುಗಾರರ ವೇತನಕ್ಕಷ್ಟು ಹಣ ಮಂಜೂರಾಗಿರುವುದರಿಂದ ಕಾವಲು ಕಾರ್ಯಂವ ಕೆಲಸ ಬಿಟ್ಟು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡಿಲ್ಲ.

ಇ) ಈ ಭಾಗದಲ್ಲಿ ನೀಲಗಿರಿಯನ್ನೊಳಗೊಂಡ ಮಿಶ್ರ ಜಾತಿ ಮರಗಳನ್ನು ಬೆಳೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ) –ಹೌದು–

ಉ) ಈ ವನ್ಯ ಪ್ರಾಣಿ ಧಾಮದಲ್ಲಿ ಕೃಷ್ಣ ಮೃಗ, ಚಿರತೆ, ಕಾಡು ಹಂದಿ, ತೋಳ ಮತ್ತು ಸಣ್ಣ ವರ್ಗದ ಸಸ್ತನಿ ಪ್ರಾಣಿಗಳು ಹಾಗೂ ಪಕ್ಷಿಗಳು ಕಾಣ ಸಿಗುತ್ತವೆ, ಇವುಗಳನ್ನು ರಕ್ಷಿಸಲಾಗುತ್ತದೆ.

ಶ್ರೀ ಕೃಷ್ಣ.—ಸ್ವಾಮಿ, ಇದು ಒಂದಾನೊಂದು ಕಾಲದಲ್ಲಿ ದಟ್ಟ ಅರಣ್ಯವಾಗಿತ್ತು. ಈಗ ಅದು ಪೂರ್ಣವಾಗಿ ನಾಶವಾಗಿದೆ. ಈಗ ಅಲ್ಲಿ ನೀಲಗಿರಿಯನ್ನು ಹೆಡತಕ್ಕ ಕಾರ್ಯಕ್ರಮದ ಜೊತೆಗೆ ಕಾವಲುಗಾರರಿಗೆ ವೇತನ ಮಾತ್ರ ಮಂಜೂರಾಗಿದ್ದು ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮ ತೆಗೆದು ಕೊಂಡಿಲ್ಲವೆಂದು ಹೇಳಿದ್ದೀರಿ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ? ಮುಂದೆ ಇದನ್ನು ಏನಾದರೂ ಅಭಿವೃದ್ಧಿ ಮಾಡುತ್ತೀರಾ ?

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಮೊದಲು ತಿಳಿಸಿದ ಹಾಗೆ ನೀಲಗಿರಿ ಮರಗಳನ್ನೊಳಗೊಂಡ ಮಿಶ್ರ ಜಾತಿಯ ಮರಗಳನ್ನು ಅಲ್ಲಿ ಬೆಳೆಸಲು ಕ್ರಮ ತೆಗೆದು ಕೊಳ್ಳಲಾಗಿದೆ. ಇತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹಣದ ಕೊರತೆ ಇರುವುದರಿಂದ, ಮುಂದಿನ ಯೋಜನೆಯಲ್ಲಿ ಹಾಕಿಕೊಂಡು ಅಭಿವೃದ್ಧಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶಿಶಿಲ ಗ್ರಾಮದ ವಿದ್ಯುದ್ದೀಕರಣ

೯೩೪. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮದ ಒಂದು ಭಾಗಕ್ಕೆ ಸುಮಾರು ಮೂರು ವರ್ಷಗಳಿಂದ ವಿದ್ಯುತ್ ಮಾರ್ಗ ಎಳೆಯದಂತೆ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು ? ಶಿಶಿಲ ಗ್ರಾಮಕ್ಕೆ ವಿದ್ಯುತ್ತ ಮಾರ್ಗ ಎಳೆಯಲು ಅವಕಾಶ ಕಲ್ಪಿಸಲಾಗುವುದೇ ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೧ ಕೆ. ವಿ. ಮಾರ್ಗವನ್ನು ಅರಣ್ಯದಲ್ಲಿ ಹಾದು ಹೋಗುವುದಕ್ಕೆ ಬದಲಾಗಿ ರಸ್ತೆಯ ಪಕ್ಕದಲ್ಲಿ ಹಾಕಲಾಗಿತ್ತಿದೆ.

ಆ) ಶಿಶಿಲ ಗ್ರಾಮದಲ್ಲಿ ವಿದ್ಯುದ್ದೀಕರಣ ಕಾರ್ಯ ಪ್ರಗತಿಯಲ್ಲಿದೆ. ಅತಿ ಶೀಘ್ರವಾಗಿ ವಿದ್ಯುತ್ ಒದಗಿಸಲಾಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೇ, ರಾಜ್ಯದಲ್ಲಿ ಎಲ್ಲಾ ಕಡೆ ಕೂಡಾ ವಿದ್ಯುತ್ ಲೈನ್‌ಗಳನ್ನು ಅರಣ್ಯದಲ್ಲಿ ಹಾಕುತ್ತಿದ್ದಾರೆ. ಆದರೆ ಬೆಳ್ತಂಗಡಿಯಲ್ಲಿ ಮಾತ್ರ ಅರಣ್ಯದಲ್ಲಿ ವಿದ್ಯುತ್ ಲೈನ್ ತೆಗೆದುಕೊಂಡು ಹೋಗಬಾರದು ಎಂದು ಹೊಸದಾಗಿ ಕಾನೂನನ್ನು ಮಾಡಲಾಗಿದೆಯೇ ? ಈ ವಿಷಯವನ್ನು ಸತತವಾಗಿ ೩ ವರ್ಷಗಳಿಂದ ಈ ಸದನದಲ್ಲಿ ನಾನು ಕೇಳುತ್ತಾ ಬಂದಿದ್ದೇನೆ. ಈಗ ಮಾನ್ಯ ಮಂತ್ರಿಗಳು, ವಿದ್ಯುತ್ ಲೈನ್‌ಗಳನ್ನು ರಸ್ತೆ ಪಕ್ಕದಲ್ಲಿ ಹಾಕಲಾಗುತ್ತಿದೆ ಎಂದಿದ್ದಾರೆ. ಆದರೆ

ರಸ್ತೆ ಬದಿಯಲ್ಲಿನ ಮರಗಳನ್ನು ಕಡಿಯುವುದಕ್ಕೆ ಜಿಲ್ಲಾ ಅರಣ್ಯಾಧಿಕಾರಿ ಅನುಮತಿ ಕೊಡುತ್ತಾ ಇಲ್ಲ. ಈ ಬಗ್ಗೆ ಸೂಕ್ತ ತನಿಖೆ ಮಾಡಿ ಅರಣ್ಯ ಅಧಿಕಾರಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಅರಣ್ಯ ಇಲಾಖೆಯ ಅಧಿಕಾರಿಗಳ ವಿರೋಧದ ಪ್ರಶ್ನೆ ಮುಖ್ಯವಲ್ಲ. ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಅಧಿಕಾರಿಗಳು ಅರಣ್ಯವನ್ನು ರಕ್ಷಣೆ ಮಾಡಬೇಕು. ಮಾನ್ಯ ಸದಸ್ಯರು ಹೇಳುವಹಾಗೆ ಕೆಲವರು ಅತಿ ಮಾಡುವುದು ಉಂಟು. ಅಂತಹದ್ದು ಏನಾದರೂ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಮಾರ್ಗ ಮಧ್ಯದಲ್ಲಿ ಲೈನುಗಳನ್ನು ಹಾಕುವ ವ್ಯವಸ್ಥೆ ಮಾಡಿದ್ದಾರೆ. ಅಲ್ಲೆರುವ ಮರಗಳನ್ನು ಕಡಿಯಲ್ಲಿಕ್ಕೆ ಅರಣ್ಯ ಅಧಿಕಾರಿಗಳು ಅನುಮತಿಯನ್ನು ಕೊಟ್ಟಿಲ್ಲ. ಮೂರು ವರ್ಷಗಳಿಂದ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಎಂಬ ಹಳ್ಳಿಗೆ ವಿದ್ಯುತ್ ಕೊಡುವುದಕ್ಕೆ ಅವಕಾಶವಾಗಿಲ್ಲ. ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ. ಅವರ ಬಗ್ಗೆ ಯಾವುದೇ ಕ್ರಮವನ್ನು ಇಷ್ಟರವರೆಗೆ ತೆಗೆದು ಕೊಂಡಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಆ ಅಧಿಕಾರಿ ಯಾರೆಂಬುದು ಗೊತ್ತಿಲ್ಲ. ಅವರಿಗಿಂತ ಮೇಲ್ಪಟ್ಟ ಅಧಿಕಾರಿಗಳಿಗೆ ಹೇಳಿ ಅವರಿಗೆ ಸರಿಯಾದ ಡೈರೆಕ್ಷನ್ ಕೊಡಿಸುತ್ತೇನೆ.

ದಕ್ಷಿಣ ಕನ್ನಡ ಗಡಿಗಳಿಂದ ಕೇರಳಕ್ಕೆ ಕಳ್ಳ ಸಾಗಾಣಿಕೆಯಾಗಿ ಮರಗಳನ್ನು ಸಾಗಿಸಿರುವ ಬಗ್ಗೆ

೩೧೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಗಡಿಗಳಿಂದ ಕೇರಳಕ್ಕೆ ಗಂಧದ ಸಾಗುವಣಿ ಬೀಟಿ ಇಂತಹ ಅರಣ್ಯ ಸಂಪತ್ತು ೧೯೮೪–೮೫ ೧೯೮೫–೮೬ ಡಿಸೆಂಬರ್ ಅಖೈರುವರೆಗೆ ಕಳ್ಳ ಸಾಗಾಣಿಕೆಯಾಗಿ ಹೋದ ಪ್ರಕರಣಗಳೆಷ್ಟು?

ಆ) ಈ ಕುರಿತು ಎಷ್ಟು ದಾವೆಗಳನ್ನು ಹೂಡಲಾಗಿದೆ, ಎಷ್ಟು ಮೊತ್ತದ ಸೊತ್ತು ಸ್ವಾಧೀನವಾಗಿದೆ ಹಾಗೂ ಎಷ್ಟು ಜನರಿಗೆ ದಂಡ ವಿಧಿಸಲಾಗಿದೆ ಮತ್ತು ಎಷ್ಟು ವಾಹನಗಳನ್ನು ಸ್ವಾಧೀನ ಮಾಡಲಾಗಿದೆ ?

ಇ) ಅರಣ್ಯ ಸಂಪತ್ತು ನಾಶವಾಗದಂತೆ ಹಾಗೂ ಕಳ್ಳ ಸಾಗಾಣಿಕೆ ಆಗದಂತೆ ತೆಗೆದುಕೊಂಡ ಹೊಸ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ೧೯೮೪–೮೫ ಮತ್ತು ೧೯೮೫–೮೬ರ ಅಖೈರ್‌ವರೆಗೆ ಮಂಗಳೂರು ಅರಣ್ಯ ವಿಭಾಗದಲ್ಲಿ ಪತ್ತೆ ಹಚ್ಚಲಾದ ಕಳ್ಳಸಾಗಾಣಿಕೆ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

	೧೯೮೪–೮೫	೧೯೮೫–೮೬
ಗಂಧ	೫	೩
ಬೀಟಿ	೧	–
ಇತರೆ	೮	೭
	೧೪	೧೦

ಒಟ್ಟು ಪ್ರಕರಣಗಳು—೨೪.